ರಾಕ್‌ಸ್ಟಾರ್ ಫ್ರೆಡ್ಡೀ

# ಬೊಹಿಮಿಯಾನ್ ರಾಪ್ಸಡಿ..



ಫ್ರೆಡ್ಡೀ ಪಾತ್ರ ನಿರ್ವಹಿಸಿದ ರಾಮೀ ಮಲೆಕ್

**ನಮ್ಮ ದೇಶದಲ್ಲೇ ಬೆಳೆದು ಇಂಗ್ಲೆಂಡ್‌ನಲ್ಲಿ ನೆಲೆಯೂರಿ ಪಶ್ಚಿಮೀ ಸಂಗೀತ ಲೋಕವನ್ನು ಎರಡು ದಶಕಗಳ ಕಾಲ ಆಳಿದ ಸ್ಟಾರ್. ಕಾಲವಾಗಿ 27 ವರ್ಷಗಳ ನಂತರ ಅವನ ಕುರಿತು ಹಾಲಿವುಡ್ ಸಿನಿಮಾ ರೂಪಿಸಿದೆ. ಇದೇ ತಿಂಗಳು ತೆರೆಕಂಡ ಹಿನ್ನೆಲೆಯಲ್ಲಿ ಒಂದು ಮೆಲುಕು.**

■ ದಿಲಾವರ್ ರಾಮದುರ್ಗ

ತನ್ನೊಳಗಿನ ಅನನ್ಯ ತುಡಿತಕ್ಕೆ, ತಾನು ತಾನಾಗಿ ಬೆಳಗುವ ಕನಸಿನ ಕಲಾವಿದನಿಗೆ ಎಲ್ಲ ತೊರೆಯಬಲ್ಲ ಛಾತಿ. ಆ ಉಮೇದಿಗೆ ಶರಣಾದವರು ಅದು ಸೆಳೆದಲ್ಲಿಗೆ ಸಾಗಿ ಬಿಡುತ್ತಾರೆ. ಸಾಧನೆಗೊಂದು ಹಾದಿ ರೂಪಿಸಿಕೊಂಡು ಜನಮಾನಸ ಆವರಿಸಿಕೊಳ್ಳುವ ಅವರಲ್ಲಿ ದಾರ್ಶನಿಕತೆಯೂ ಮಿಸುಕಾಡುತ್ತಿರುತ್ತದೆ. ಕಲೆ ನಿಜಾರ್ಥದಲ್ಲಿ ಅಂತಃಶಕ್ತಿ.

ಆತ ಅಪ್ರತಿಮ ಕಲಾವಿದ. ಅವನಲ್ಲಿ ಅಸ್ತಿತ್ವದ ಬಗೆಗಿನ ತೊಳಲಾಟವೂ ಇತ್ತು. ಅದು ಲೈಂಗಿಕ ನಡೆಯ (ಸೆಕ್ಸ್ಯುಲ್ ಓರಿಯಂಟೇಷನ್) ತಾಕಲಾಟದ್ದು. ಅವನೊಳಗೇ ನಡೆವ ನಿರಂತರ ಮಹಾಸ್ಫೋಟ. ಸಲಿಂಗಿ, ಭಾವಪಲ್ಲಟಗಳ ಬೈಸೆಕ್ಸ್ಯುಲ್ ಜೀವಗಳದ್ದು ಹೇಳಿಕೊಳ್ಳಲಾಗದ ಸಂಕಟ. ಅದರಿಂದ ಹೊರಬರುವ ಯಾ ಅದರೊಂದಿಗೆ ಬದುಕುವ ವಿಚಿತ್ರ ಮಾನಸಿಕ ಸಂದಿಗ್ಧ. ಇಷ್ಟೆಲ್ಲ ಸಂಕೀರ್ಣತೆ ಹೊಂದಿದ ಆ ಕಲಾವಿದ ವಿಶ್ವ ಕಂಡ ಅಪ್ಪಟ ಹಾಡುಗಾರ. ಅವನದು ಯಶಸ್ಸು, ಸಂಭ್ರಮದ ಜೊತೆಗೆ ದುರಂತದ ಬುದುಕು. ದೇಶ–ಗಡಿ, ಸಂಸ್ಕೃತಿಗಳ ಭಿನ್ನತೆಯಾಚೆ ಸಮಷ್ಟಿ ನೆಲೆಯಲ್ಲಿ ಕಟ್ಟಿಕೊಟ್ಟ ಪ್ರಜ್ಞೆ, ಆಧುನಿಕ ಕಾಲಕ್ಕೆ ನೀಡಿದ ದಾರ್ಶನಿಕ ಸ್ಪರ್ಶದ ಆತನ ಸಂಗೀತ ಅನನ್ಯವೇ.

* * *

1946, ಆಗಿನ ಮುಂಬೈ ಪ್ರಾಂತದ ಗುಜರಾತಿ ಫಾರಸೀ ಕುಟುಂಬದಲ್ಲಿ ಜನಿಸಿದ ಫಾರೂಖ್ ಬಲ್ಸಾರಾಗೆ ಎಳವೆಯಿಂದಲೇ ಪಶ್ಚಿಮೀ ಸಂಗೀತದ ಖಯಾಲಿ. ಮುಂಬೈ ಸಮೀಪದ ಪಂಚಗನಿಯಲ್ಲಿ ವಿಲಾಯಿತಿ ಶಾಲಾ ದಿನಗಳಿಂದಲೇ 'ದಿ ಹೆಕ್ಟಿಕ್ಸ್' ಎನ್ನುವ ಬ್ಯಾಂಡ್ ಕಟ್ಟಿಕೊಂಡು ಹಾಡಿದ ಸ್ವತಂತ್ರ ಮನಸ್ಥಿತಿಯ ಹುಡುಗನೀತ. ತನ್ನ ಕುಟುಂಬ ಮುಂಬೈನಿಂದ ತಾಂಜಾನಿಯಾ ಮತ್ತೆ ಅಲ್ಲಿನ ದಂಗೆ, ಹಿಂಸೆಯ ವಾತಾವರಣದಿಂದ ದೂರವಾಗಲು ಲಂಡನ್ ಸೇರುವ ಹೊತ್ತಿಗಾಗಲೇ ಮೈ–ಮನದ ಸುಳಿಯಲ್ಲಿ ಪಶ್ಚಿಮೀ ಸಂಗೀತದ್ದೇ ನಾದ. ಓದಿಗೆ ಸೇರಿದ್ದು ಕಲಾ ವಿಭಾಗದ ಡಿಪ್ಲೊಮಾಗೆ. ಲಂಡನ್‌ನಲ್ಲಿ ಆರ್ಟ್ ಅಂಡ್ ಗ್ರಾಫಿಕ್ಸ್‌ನಲ್ಲಿ ಡಿಪ್ಲೊಮಾ ಪದವಿ ಪಡೆದು ಬದುಕಿಗಾಗಿ ಏನೆಲ್ಲ ಚಾಕರಿ ಮಾಡಿದ. ಗೆಳತಿಯ ಜೊತೆಗೂಡಿ ಹಳೆಯ ಬಟ್ಟೆಗಳನ್ನು ಬೀದಿಯಲ್ಲಿ ಮಾರಿದ. ಹೀಥ್ರೋ ಏರ್‌ಪೋರ್ಟ್‌ನಲ್ಲಿ ಲಗೇಜ್ ಬ್ಯಾಗ್ ಎತ್ತುವ ಹುಡುಗನಾದ. ಮುಗ್ಧ, ಅಷ್ಟೇ ಮರ್ಕ್ಯೂರಿಯಂಥ ಚುರುಕುತನದ ಉಬ್ಬು ಹಲ್ಲಿನ ಯುವಕನ ನರ ನಾಡಿಗಳಲ್ಲಿ ಸಂಗೀತವೇ ಆವರಿಸಿಕೊಂಡಿತ್ತು. ಅಪ್ರತಿಮ ಪಿಯಾನೊ ವಾದಕ. ಅದರ ಯಾವ ಕೀಲಿ ಮಣೆಯನ್ನೂ ಉಳಿಸದ ಮಾಂತ್ರಿಕ ಬೆರಳುಗಳವು. ಅಲೆಯದ ಬ್ಯಾಂಡ್‌ಗಳಿಲ್ಲ. ರಾಗ, ಭಾವದ ಎಂಥ ಉತ್ಕೃಷ್ಟ ಹಂತವನ್ನೂ ಮುಟ್ಟಬಲ್ಲ ಆ ದನಿ ಸ್ಫಟಿಕದಂತೆ ಶುದ್ಧ, ಸ್ವಚ್ಛ, ಹರಿತ. ಇನ್ನು ತನ್ನೆದೆಯ ಹಾಡುಗಳನ್ನು ಹಾಡದೇ ಬದುಕಲಾರೆ ಅನ್ನಿಸಿ ತಾನೇ ಕಾವ್ಯ ಕಟ್ಟಿಕೊಂಡ. 'ಕ್ವೀನ್' ಎನ್ನುವ ಬ್ಯಾಂಡ್ ರೂಪಿಸಿದ. ಸಾಥಿಗಳ ಭವಿಷ್ಯ ರಾಶಿ ಚಿನ್ಹೆಗಳ ಬಳಸಿ ಲೋಗೊ ರೂಪಿಸಿಕೊಂಡ. 'ಕ್ವೀನ್' ಎಲ್ಲರಿಗೂ ಸುಲಭಕ್ಕೆ ನೆನಪಲ್ಲಿ ಉಳಿಯುವಂಥ ಹೆಸರು ಎನ್ನುವ ಸಬೂಬು ಹೇಳಿ ಅಧಿಕೃತ ಲಾಂಛನವಾಗಿಸಿಕೊಂಡ. ಅವನೊಳಗಿನ ದೈಹಿಕ ಮನೋಕಾಮನೆಗಳ ಭಿನ್ನ ಸ್ತರದ ಸೂಚನೆ ಸಿಕ್ಕಿದ್ದು ಆಗಲೇ.

ತನ್ನೊಳಗೆ ನಡೆಯುತ್ತಿರುವ ಕಲೆಯ ತುಡಿತ, ಮನೋಕಾಮನೆಗಳ ತಾಕಲಾಟವನ್ನು ಗ್ರಹಿಸಿಕೊಂಡ ಅಂಥ ವ್ಯಕ್ತಿತ್ವದ ಬಹುಮುಖ್ಯ ಜರ್ನಿ ಆ ಕ್ಷಣದಿಂದಲೇ ಶುರುವಾಗಿತ್ತು. 70 ಮತ್ತು 80ರ ದಶಕದ ಪಶ್ಚಿಮೀ ಸಂಗೀತ ಲೋಕವನ್ನು ಅಕ್ಷರಶಃ ಆಳಿದ.

ಏನಾದರೂ ಸಾಧಿಸಲೆಂದೇ ಯಾರೂ ಹುಟ್ಟುವುದಿಲ್ಲ. ಅವರೊಳಗಿರುವ ತುಡಿತಗಳೇ ಸಾಧನೆಗೆ ಪ್ರೇರೇಪಿಸಬಹುದಷ್ಟೇ. ಅಂಥ ಪ್ರೇರಣೆ ಕೆಲವರಿಗೆ ಅಧ್ಯಾತ್ಮದಂಥ ಅನುಭೂತಿ. ದರ್ಶನ. ಸಂಗೀತ ಎನ್ನುವ ಕಲೆ ಮನರಂಜನೆ, ಧ್ಯಾನ, ದರ್ಶನವೂ ಆಗಲು ಸಾಧ್ಯವಿದೆ. ಇಸಂ, ಧರ್ಮ ಕಟ್ಟುಪಾಡಿಲ್ಲದೇ ತಾ